ಕರ್ನಾಟಕ ಸರ್ಕಾರ

# ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ



**ಶ್ರೀ ಬಿ. ಎಸ್. ಯಡಿಯೂರಪ್ಪ**
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಡಾ|| ಕೆ. ಸಿ. ನಾರಾಯಣಗೌಡ**
ಮಾನ್ಯ ಸಚಿವರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ

# ವಾರ್ಷಿಕ ವರದಿ

## 2019-20 & 2020-21



# ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶಗಳು

- ತಾವು ವಾಸಿಸುವ ಸಮುದಾಯ ಅಥವಾ ಸಮಾಜದ ಸಮಸ್ಯೆಗಳನ್ನು ಅರಿಯಲು ಪ್ರಯತ್ನಿಸುವುದು.
- ಸಮಾಜದ ಅಗತ್ಯಗಳನ್ನು ಗುರುತಿಸಿ, ಆ ಬಗ್ಗೆ ಏನು ಮಾಡಬಹುದೆಂದು ಆಲೋಚಿಸಿ ಪ್ರಯತ್ನಿಸುವುದು.
- ಸಾಮಾಜಿಕ ಹಾಗೂ ಪೌರ ಕರ್ತವ್ಯಗಳನ್ನು ಅರ್ಥಮಾಡಿಕೊಂಡು ಅದರಂತೆ ನಡೆದುಕೊಳ್ಳುವುದು.
- ವೃತ್ತಿಗೌರವ – ಕಾಯಕದ ಬಗ್ಗೆ ಕಾಳಜಿಯನ್ನು ಬೆಳೆಸಿಕೊಳ್ಳುವುದು.
- ವಿದ್ಯಾವಂತರ ಮತ್ತು ಅನಕ್ಷರಸ್ಥರ ಮನೋಭಾವದಲ್ಲಿ ಇರಬಹುದಾದ ಅಂತರವನ್ನು ಕಡಿಮೆ ಮಾಡುವುದು.
- ಕಲಿತ ವಿದ್ಯೆಯನ್ನು ಪ್ರಚಲಿತ ಸಮಸ್ಯೆಗಳ ಪರಿಹಾರಕ್ಕೆ ಹೇಗೆ ಬಳಸಬೇಕೆಂದು ಕಂಡುಕೊಳ್ಳುವುದು.
- ಪ್ರಕೃತಿ ವಿಕೋಪ, ಬೆಂಕಿ ಅನಾಹುತ, ಮತೀಯ ಗಲಭೆ ಇತ್ಯಾದಿ ಸಂದರ್ಭಗಳಲ್ಲಿ ಸಂತ್ರಸ್ತರ ನೆರವಿಗೆ ಬರುವುದು.
- ಪರಸ್ಪರ ಒಬ್ಬರನ್ನೊಬ್ಬರು ಅರಿಯುವುದು.
- ಮೈತ್ರಿ, ಸೌಹಾರ್ದತೆ, ಸಹಕಾರ ಮನೋಭಾವ, ಸೇವಾ ಮನೋಭಾವ, ಸಹಜೀವನ ಇವುಗಳನ್ನು ಮೈಗೂಡಿಸಿಕೊಳ್ಳುವುದು.
- ವ್ಯವಸ್ಥಾಪನಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.
- ಉತ್ತಮ ನಾಯಕತ್ವ ಗುಣಗಳನ್ನು ರೂಢಿಸಿಕೊಳ್ಳುವುದು.
- ರಾಷ್ಟ್ರೀಯ ಭಾವೈಕ್ಯತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಇತರರಲ್ಲಿಯೂ ಈ ಮನೋಭಾವನ್ನು ಬೆಳೆಸುವುದು.

# ಎನ್.ಎಸ್.ಎಸ್ ನೇತಾರರು, ಕರ್ನಾಟಕ



**ಶ್ರೀ ಬಿ.ಎಸ್. ಯಡಿಯೂರಪ್ಪ**
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



**ಡಾ|| ಕೆ. ಸಿ. ನಾರಾಯಣಗೌಡ**
ಮಾನ್ಯ ಸಚಿವರು
ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ



**ಡಾ|| ಶಾಲಿನಿ ರಜನೀಶ್**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ



**ಶ್ರೀ ಪ್ರತಾಪ್ ಲಿಂಗಯ್ಯ**
ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು
ರಾಜ್ಯ ಎನ್.ಎಸ್.ಎಸ್. ಕೋಶ,
ಕರ್ನಾಟಕ ಸರ್ಕಾರ



**ಶ್ರೀ ಖಾದ್ರಿ ನರಸಿಂಹಯ್ಯ**
ಪ್ರಾದೇಶಿಕ ನಿರ್ದೇಶಕರು
ಎನ್.ಎಸ್.ಎಸ್ ಪ್ರಾದೇಶಿಕ ಕಛೇರಿ
ಬೆಂಗಳೂರು, ಭಾರತ ಸರ್ಕಾರ



## ಸಂದೇಶ

"ಇಂದಿನ ಯುವ ಜನರೇ ನಮ್ಮ ದೇಶದ ಭವಿಷ್ಯ" ಯುವಜನತೆಯ ಉಜ್ವಲವಾದವ್ಯಕ್ತಿತ್ವನಿರ್ಮಾಣಕಾರ್ಯದಲ್ಲಿಅತ್ಯಂತಫಲಪ್ರದವಾಗಿಮತ್ತುಯಶಸ್ವಿಯಾಗಿ ಬೆಳೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಯ ಸಾಧನೆಯು ಇಡೀ ರಾಷ್ಟ್ರದಲ್ಲಿಯೇ ಗಮನಾರ್ಹವಾಗಿದೆ. ಸ್ನೇಹ, ಸಹಕಾರ ಮತ್ತು ನಿಸ್ವಾರ್ಥ ಸೇವೆಯನ್ನು ಉಸಿರನ್ನಾಗಿಸಿಕೊಂಡು ರಾಷ್ಟ್ರಪ್ರೇಮ, ಭಾವೈಕ್ಯತೆ, ಸೌಹಾರ್ದತೆ, ಜಾತ್ಯಾತೀತ ಮತ್ತು ಸಮಾನತೆಯ ರಾಷ್ಟ್ರೀಯ ಮೌಲ್ಯಗಳನ್ನು ಯುವಕರ ಮನಸ್ಸಿನಲ್ಲಿ ಮೂಡಿಸುವ ಸವಾಲನ್ನು ಕಳೆದ 50 ವರ್ಷಗಳಿಂದ ಎನ್.ಎಸ್.ಎಸ್. ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸುವಲ್ಲ ಯುವಸಬಲೀಕರಣ ಮತ್ತುಕ್ರೀಡಾ ಇಲಾಖೆಯಪಾತ್ರವು ಮಹತ್ವವಾದುದು.

ರಾಜ್ಯದ 48 ವಿಶ್ವವಿದ್ಯಾನಿಲಯಗಳು ಮತ್ತು 6 ನಿರ್ದೇಶನಾಲಯಗಳ ಅಧೀನದ ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು 5 ಲಕ್ಷ ಸ್ವಯಂಸೇವಕ/ಸೇವಕಿಯರು ರಾಷ್ಟ್ರೀಯ ಸೇವಾ ಯೋಜನೆಗಳ ಧ್ಯೇಯೋದ್ದೇಶಗಳಿಗೆ ಬದ್ಧರಾಗಿ ಶಿಸ್ತಿನ ಸಿಪಾಯಿಗಳಾಗಿ ತಮ್ಮ ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರವಲ್ಲ ಸುತ್ತ ಮುತ್ತಲಿನ ಸಮುದಾಯಕ್ಕೆ ಮಾದರಿಯಾಗಿ ಹೊರಹೊಮ್ಮುತ್ತಿದ್ದಾರೆ. ಅಂತಹವರಲ್ಲಿ ಅತ್ಯುತ್ತಮವಾದ ಸೇವೆ ಸಲ್ಲಿಸಿದವರನ್ನು ಗುರುತಿಸಿ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪ್ರದಾನಮಾಡುವಪರಂಪರೆಯನ್ನು ನಮ್ಮ ಹೆಮ್ಮೆಯ ಕರ್ನಾಟಕ ಸರ್ಕಾರ 1989ರಿಂದ ಹಮ್ಮಿಕೊಂಡಿದೆ.

ಔಪಚಾರಿಕ ಶಿಕ್ಷಣದೊಂದಿಗೆ, ಅನೇಕ ರಚನಾತ್ಮಕ ಜನಪರ ಕಾರ್ಯಯೋಜನೆಗಳನ್ನು ಅಂದರೆ ಪರಿಸರ ಸಂರಕ್ಷಣೆ, ಆರೋಗ್ಯ, ನೈರ್ಮಲ್ಯ, ರಸ್ತೆ ನಿರ್ಮಾಣ, ನೆಲ-ಜಲ ಸಂವರ್ಧನೆ, ವನ ನಿರ್ಮಾಣ, ಶೌಚಾಲಯ ನಿರ್ಮಾಣ, ನಾಯಕತ್ವದ ಬೆಳವಣಿಗೆ ಮುಂತಾದವುಗಳ ಬಗ್ಗೆ ಜಾಗೃತಿ ಮತ್ತು ತರಬೇತಿ ನೀಡಿದೆ. ಬಹುಮುಖಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸುವುದರ ಮೂಲಕ ರಾಷ್ಟ್ರೀಯ ಸೇವಾ ಯೋಜನೆಯ ಉಳಿದೆಲ್ಲಾ ಅಧ್ಯಯನ ಶಿಸ್ತುಗಳಿಗೆ ಆದರ್ಶ ಪ್ರಾಯ, ಆಶಾದಾಯಕ ಕಾರ್ಯಕ್ರಮವಾಗಿ ಬೆಳೆಯುತ್ತಿದೆ.

ಕೇಂದ್ರ ಸರ್ಕಾರದ ಅನುದಾನವಲ್ಲದೆ 2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ದೇಶದಲ್ಲೆ ಅಪೂರ್ವ ಎನ್ನುವಂತೆ ರೂ. 6.44 ಕೋಟಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿದೆ. ರಾಜ್ಯ ಗಣರಾಜ್ಯೋತ್ಸವ, ರಾಜ್ಯ ಯುವಜನೋತ್ಸವ, ಪರಿಸರ ಕಾರ್ಯಕ್ರಮ, ಡಾ.ಬಿ.ಆರ್.ಅಂಬೇಡ್ಕರ್, ವಿವೇಕಾನಂದ, ಮಹಾತ್ಮ ಗಾಂಧೀಜಿಯವರ ಚಿಂತನೆಗಳ ಪ್ರಸಾರ ಕಾರ್ಯಕ್ರಮಗಳು, 40 ಸಾಹಸಶಿಬಿರಗಳು, 10 ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳನ್ನು ಆಯೋಜಿಸಿ ರಾಷ್ಟ್ರದಲ್ಲಿಯೇ ಎನ್.ಎಸ್.ಎಸ್ ಅನುಷ್ಠಾನಕ್ಕೆ ಮಾದರಿಯಾಗಿದೆ, ಸ್ವಯಂ ಸೇವಕರ ಡಾಟಾಬೇಸ್ ಯೋಜನೆಯನ್ನು ಈಗ ಅನುಷ್ಠಾನಗೊಳಸಲಾಗುತ್ತಿದೆ, ರಾಷ್ಟ್ರ ಮಟ್ಟದಲ್ಲಿ ನಡೆದ ಯುವ ಪಾರ್ಲಿಮೆಂಟ್ ಸ್ಪರ್ಧೆಯಲ್ಲಿ ರಾಜ್ಯದ ಸ್ವಯಂಸೇವಕಿ ದ್ವಿತೀಯ ಸ್ಥಾನ ಪಡೆದು ಪ್ರಧಾನ ಮಂತ್ರಿಯವರ ಪ್ರಶಂಸೆಗೆ ಪಾತ್ರರಾಗಿದ್ದಾರೆ, ರಾಜ್ಯ ಸರ್ಕಾರವು ಯುವಜನತೆಯ ಅಭಿವೃದ್ಧಿ ದೃಷ್ಟಿಯಿಂದ ಈ ಎಲ್ಲಾ ಚಟುವಟಿಕೆಗಳನ್ನು ರಾಷ್ಟ್ರೀಯ ಸೇವಾ ಯೋಜನೆಯು ಅವಿಭಾಜ್ಯ ಚಟುವಟಿಕೆಗಳೆಂದು ಪರಿಗಣಿಸಿದೆ, ಸುವರ್ಣ ಮಹೋತ್ಸವ ಆಚರಿಸಿದ ಹೊಸ್ತಿಲಲ್ಲಿ ವಿಶ್ವವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳ ಮೂಲಕ ಎನ್.ಎಸ್.ಎಸ್. ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾಗೊಳಬೇಕೆಂಬ ಆಶಯದೊಂದಿಗೆ ಸಂಬಂಧಿಸಿದ ಎಲ್ಲರಿಗೂ ಅಭಿನಂದನೆಗಳು.

**ಡಾ|| ಕೆ. ಸಿ. ನಾರಾಯಣಗೌಡ**
ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು,
ಕರ್ನಾಟಕ ಸರ್ಕಾರ

## ಪರಿವಿಡಿ


| ಕ್ರಂ.ಸಂ. | ಕಾರ್ಯಕ್ರಮದ ವಿವರಗಳು | ಪುಟ ಸಂಖ್ಯೆ |
|---|---|---|
| 1 | ಆಯವ್ಯಯ ಹಂಚಿಕೆ ಮತ್ತು ಬಳಕೆ | 5 |
| 2 | 2019-20 ಮತ್ತು 2020-21ನೇ ಸಾಲಿಗೆ ಸ್ವಯಂಸೇವಕರ ಹಂಚಿಕೆ ಮತ್ತು ದಾಖಲಾತಿ | 5 |
| 3 | ವಿಶ್ವ ವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳಿಗೆ ಸ್ವಯಂಸೇವಕರ ಹಂಚಿಕೆ ಮತ್ತು ವಿಶ್ವ ವಿದ್ಯಾನಿಲಯ ನಿರ್ದೇಶನಾಲಯಗಳು ನೀಡಿದ ವರದಿಯ ಆಧಾರದ ಮೇಲೆ ಕೆಲವು ಮಹತ್ವದ ಸಾಧನೆಗಳು | 6-8 |
| | 2019-20 ನೇ ಸಾಲಿನ ಮುಖ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳು | 9 |
| 4 | ನಿರಂತರ ಸ್ವಚ್ಛತಾ ಚಟುವಟಿಕೆಗಳು / ಅಂತರರಾಷ್ಟ್ರೀಯ ಯೋಗ ದಿನಾಚರಣೆ | 9 |
| 5 | ರಾಜ್ಯಮಟ್ಟದ ಸಲಹಾ ಸಮಿತಿ ಸಭೆ / ಸಂಯೋಜನಾಧಿಕಾರಿಗಳ ಸಭೆ: | 10 |
| 6 | ಕರ್ನಾಟಕ ಸರ್ಕಾರದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಆಯೋಜನೆ | 11 |
| 7 | ಗಣರಾಜ್ಯೋತ್ಸವ ಪಥಸಂಚಲನ ಶಿಬಿರ / 31.10.2019 ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತಾ ದಿವಸ್" ಕಾರ್ಯಕ್ರಮದ ಆಚರಣೆ. | 12 |
| 8 | ಜೀವನ ಕೌಶಲ್ಯ ಶಿಕ್ಷಣ ಮತ್ತು ಆಪ್ತ ಸಲಹೆ ತರಬೇತಿ | 13 |
| 9 | ಮಹಾತ್ಮಗಾಂಧೀಜಿಯವರ ಜನ್ಮ ದಿನೋತ್ಸವದ ಅಂಗವಾಗಿ ಕಾರ್ಯಕ್ರಮ | 14 |
| 10 | ಸಂವಿಧಾನ ಶಿಲ್ಪಿ ಡಾ ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನ | 15 |
| 11 | ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ | 16 |
| 12 | ಸಾಹಸ ಶಿಬಿರ | 17 |
| 13 | ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ವಿಸ್ತರಣೆ | 20 |
| 14 | ರಾಷ್ಟ್ರೀಯ ಸೇವಾ ಯೋಜನೆಯನ್ನು ಕ್ರೀಡಾ ವಸತಿಶಾಲೆಗಳಿಗೆ ವಿಸ್ತರಣೆ | 21 |
| 15 | ಶಾಲಾ ಆರೋಗ್ಯ ಕಾರ್ಯಕ್ರಮ. | 21 |
| 16 | ಪ್ರಕೃತಿ ವಿಕೋಪ ಕಾರ್ಯಾಚರಣೆ | 22 |
| 17 | ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭ | 23 |
| 18 | ಮತದಾನ ಜಾಗೃತಿ ಕಾರ್ಯಕ್ರಮ | 24 |
| 19 | ಮಾದಕ ವ್ಯಸನ ವಿರುದ್ಧ ಅರಿವು ಮೂಡಿಸುವ ಕಾರ್ಯಕ್ರಮ | 24 |
| 20 | ಏಡ್ಸ್ ರೋಗ ತಡಗಟ್ಟುವಿಕೆ ಕಾರ್ಯಕ್ರಮ | 25 |
| 21 | ರಕ್ತದಾನ ಶಿಬಿರ | 26 |
| 22 | ವಿಶ್ವ ಪರಿಸರ ದಿನ | 26 |
| 23 | ಫಿಟ್ ಇಂಡಿಯಾ ಕಾರ್ಯಕ್ರಮ | 26 |
| 24 | ಕ್ಯಾನ್ಸರ್ ಔಟ್‌ರೀಚ್ ಕಾರ್ಯಕ್ರಮ | 27 |
| 25 | Youth Exchange Programme,China | 27 |
| 26 | ರಾಷ್ಟ್ರೀಯ ಸೇವಾ ಯೋಜನೆಯನ್ನು ಜಾಲತಾಣದಲ್ಲಿ ಅಳವಡಿಸಿರುವ ಕುರಿತು | 28 |
| 27 | 2020-21ನೇ ಸಾಲಿನ ಕಾರ್ಯಕ್ರಮಗಳು ಮತ್ತು ಸಂಬಂಧಿಸಿದ ಛಾಯಚಿತ್ರಗಳು | 29-30 |
| 28 | ಕೋವಿಡ್-19ಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಸಂಬಂಧಿಸಿದ ಛಾಯಚಿತ್ರಗಳು | 31-32 |

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ,

### ಪೀಠಿಕೆ



ಶಿಕ್ಷಣದೊಂದಿಗೆ ಸೇವೆ ಮತ್ತು ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನ ಎಂಬ ಎರಡು ಧ್ಯೇಯಗಳೊಂದಿಗೆ ಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ 1969ರ ಸೆಪ್ಟೆಂಬರ್ 24ರಂದು ರಾಷ್ಟ್ರೀಯ ಸೇವಾ ಯೋಜನೆ ಅನುಷ್ಠಾನಗೊಂಡಿತು. ದೇಶದಲ್ಲಿ 41 ವಿಶ್ವ ವಿದ್ಯಾನಿಲಯಗಳಲ್ಲಿ 47000 ಸ್ವಯಂ ಸೇವಕರೊಂದಿಗೆ ಆರಂಭವಾದ ಈ ಯೋಜನೆಯು ಇಂದು 500ಕ್ಕೂ ಹೆಚ್ಚು ವಿಶ್ವ ವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳಲ್ಲಿ ಸುಮಾರು 40 ಲಕ್ಷ ಸ್ವಯಂ ಸೇವಕ/ಸೇವಕಿಂಯರು ನೊಂದಾಯಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ 4000ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ 5ಲಕ್ಷ ಸ್ವಯಂ ಸೇವಕ/ಸೇವಕಿಯರನ್ನು ದಾಖಲಿಸಿಕೊಳ್ಳಲಾಗಿದೆ.

ರಾಷ್ಟ್ರೀಯ ಸೇವಾ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದ್ದು ಕೇಂದ್ರ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಮಂತ್ರಾಲಯವು ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ಕರ್ನಾಟಕ ಸರ್ಕಾರದ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವರ ಮಾರ್ಗದರ್ಶನದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರು ರಾಷ್ಟ್ರೀಯ ಸೇವಾ ಯೋಜನಾ ಕೋಶದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳಲ್ಲಿ ಒಬ್ಬರು ಕಾರ್ಯಕ್ರಮ ಸಂಯೋಜನಾಧಿಕಾರಿಗಳು ರಾಜ್ಯದಲ್ಲಿರುವ 52 ವಿಶ್ವವಿದ್ಯಾನಿಲಯಗಳು ಮತ್ತು 04 ನಿರ್ದೇಶನಾಲಯಗಳಲ್ಲಿ ಒಟ್ಟು 56 ಕಾರ್ಯಕ್ರಮ ಸಂಯೋಜನಾಧಿಕಾರಿಗಳು ಮತ್ತು 5200 ಕಾರ್ಯಕ್ರಮ ಅಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಲ್ಲಿ ನಿರತರಾಗಿದ್ದಾರೆ. ಕೇಂದ್ರಸರ್ಕಾರವು 2,78,200 ಸ್ವಯಂ ಸೇವಕರನ್ನು ದೈನಂದಿನ ಕಾರ್ಯಕ್ರಮಗಳಿಗೆ ಹಾಗೂ 1,39,100 ಸ್ವಯಂ ಸೇವಕರನ್ನು ವಿಶೇಷ ಶಿಬಿರಗಳ ನಡೆಸಲು ಕೇಂದ್ರ ಸರ್ಕಾರವು ಗುರಿಯನ್ನು ನೀಡಿದೆ. ಈ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಸಂಪೂರ್ಣವಾಗಿ ಅನುದಾನವನ್ನು ಬಿಡುಗಡೆ ಮಾಡುತ್ತದೆ ಮತ್ತು ಭಾರತ ಸರ್ಕಾರದ 2006ರ ಕೈಪಿಡಿಯ ಪ್ರಕಾರ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಸಾಲಿನ ಅಂತ್ಯದವರೆಗೆ 890 ಸ್ವ–ಆರ್ಥಿಕ ಘಟಕಗಳಡಿ 89,000 ಸ್ವಯಂ ಸೇವಕರನ್ನು ನೊಂದಾಯಿಸಲಾಗಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ನೊಂದಾಯಿಸುವ ಸ್ವಯಂಸೇವಕರು ಸ್ವಆರ್ಥಿಕ ಘಟಕದಡಿ ನೊಂದಾಯಿಸುವ ಸ್ವಯಂಸೇವಕರನ್ನೊಳಗೊಂಡಂತೆ ಒಟ್ಟು 6,00,000 ಸ್ವಯಂಸೇವಕ/ಸೇವಕಿಯರು ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ.

ದೇಶದಲ್ಲೇ ಅಪೂರ್ವ ಎನ್ನುವಂತೆ ರಾಜ್ಯ ಸರ್ಕಾರವು ರಾಷ್ಟ್ರೀಯ ಯೋಜನೆಯ ಚಟುವಟಿಕೆಗಳಿಗೆ ವಿಶೇಷ ಅನುದಾನವನ್ನು ನೀಡುತ್ತಿದೆ. ಕೇಂದ್ರ ಸರ್ಕಾರದ ಅನುದಾನವಲ್ಲದೆ 2019–20 ಮತ್ತು 2020–21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರೂ. 6.48 ಕೋಟಿ ಮತ್ತು ರೂ.3.61 ಕೋಟಿ ವಿಶೇಷ ಅನುದಾನವನ್ನು ಹಂಚಿಕೆ ಮಾಡಿದೆ. ರಾಜ್ಯ ಗಣರಾಜ್ಯೋತ್ಸವ ಪಥಸಂಚಲನ, ರಾಜ್ಯ ಯುವಜನೋತ್ಸವ, 11 ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಪರಿಸರ ಕಾರ್ಯಕ್ರಮ, ಡಾ.ಬಿ.ಆರ್.ಅಂಬೇಡ್ಕರ್, ವಿವೇಕಾನಂದ, ಮಹಾತ್ಮ ಗಾಂಧೀಜಿಯವರ ಚಿಂತನೆಗಳ ಪ್ರಸಾರ ಕಾರ್ಯಕ್ರಮಗಳು, 40 ಸಾಹಸ ಶಿಬಿರಗಳನ್ನು ಆಯೋಜಿಸಿ ರಾಷ್ಟ್ರದಲ್ಲಿಯೇ ಎನ್.ಎಸ್.ಎಸ್. ಅನುಷ್ಠಾನಕ್ಕೆ ಮಾದರಿಯಾಗಿದೆ. ಸ್ವಯಂ ಸೇವಕರ ಡಾಟಾಬೇಸ್ ಯೋಜನೆಯನ್ನು ಈಗ ಅನುಷ್ಠಾನಗೊಳಿಸಲಾಗುತ್ತಿದೆ. ಈ ವರ್ಷ ರಾಷ್ಟ್ರೀಯ ಸೇವಾ ಯೋಜನೆಗೆ 50 ವರ್ಷಗಳು ತುಂಬುತ್ತಿದ್ದು ಸುವರ್ಣ ಮಹೋತ್ಸವದ ಸಮರೋಪ ಸಮಾರಂಭವನ್ನು ಆಚರಿಸಲಾಗಿದೆ. 2020–21ನೇ ಸಾಲಿನ ಆಚರಿಸಲಾದ ಕಾರ್ಯಕ್ರಮಗಳನ್ನು ಮುಂದೆ ನೀಡಲಾಗಿದೆ.

## ಆಯುವ್ಯಯ ಹಂಚಿಕೆ ಮತ್ತು ಬಳಕೆ

**2019-20 ಮತ್ತು 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಆಯವ್ಯಯ ಮತ್ತು ಹಂಚಿಕೆ ಮತ್ತು ಬಳಕೆಯಾದ ಅನುದಾನ ಕೆಳಗಿನಂತಿದೆ.**

| | | ಅನುದಾನ ಹಂಚಿಕೆ ಲಕ್ಷರೂಗಳಲ್ಲಿ | ಬಿಡುಗಡೆಯಾದ ಅನುದಾನ ಲಕ್ಷರೂಗಳಲ್ಲಿ | ಬಿಡುಗಡೆಯಾದ ಅನುದಾನದಲ್ಲಿ ಬಳಕೆಯಾದ ಅನುದಾನ ಲಕ್ಷ ರೂ ಗಳಲ್ಲಿ | ಶೇಕಡಾವಾರು |
|---|---|---|---|---|---|
| 2019-20 | ಕೇಂದ್ರ ಸರ್ಕಾರ | 1321.45 | 990.00 | 990.00 | 100.00 |
| | ರಾಜ್ಯ ಸರ್ಕಾರ | 648.00 | 648.00 | 640.96 | 98.91 |
| 2020-21 | ಕೇಂದ್ರ ಸರ್ಕಾರ | 1321.45 | - | - | - |
| | ರಾಜ್ಯ ಸರ್ಕಾರ | 361.00 | 355.64 | 340.84 | 94.42 (ಯೋಜನೆ: 100%) |

2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು 990.00 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದು ಸದರಿ ಮೊತ್ತವನ್ನು ರಾಷ್ಟ್ರೀಯ ಸೇವಾ ಯೋಜನಾ ಕೋಶವು ವಿಶ್ವ ವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳಿಗೆ ಬಿಡುಗಡೆ ಮಾಡಿದೆ. 2018-19ನೇ ಸಾಲಿನಲ್ಲಿ ರೂ. 25.08 ಲಕ್ಷಗಳನ್ನು ವಿಶ್ವ ವಿದ್ಯಾನಿಲಯಗಳಲ್ಲಿ ಬಳಕೆಯಾಗದೆ ಉಳಿದಿರುವುದನ್ನು 2019-20ನೇ ಸಾಲಿನಲ್ಲಿ ಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಅನುದಾನ ರೂ. 990.00 ಲಕ್ಷಗಳನ್ನು (ಶೇಕಡ 76) ವಿಶ್ವವಿದ್ಯಾನಿಲಯಗಳು/ನಿರ್ದೇಶನಾಲಯಗಳಿಗೆ ಬಿಡುಗಡೆ ಮಾಡಲಾಗಿದೆ.

2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನವು ಕೋವಿಡ್-19 ಕಾರಣಗಳಿಂದ ಬಿಡುಗಡೆಯಾಗದ ಕಾರಣ ವಿಶ್ವವಿದ್ಯಾನಿಲಯಗಳು / ನಿರ್ದೇಶನಾಲಯಗಳಿಗೆ ಬಿಡುಗಡೆಮಾಡಲಾಗಿರುವುದಿಲ್ಲ.

## 2019-20 ಮತ್ತು 2020-21ನೇ ಸಾಲಿಗೆ ಸ್ವಯಂಸೇವಕರ ಹಂಚಿಕೆ ಮತ್ತು ದಾಖಲಾತಿ

| | | ಕೇಂದ್ರ ಸರ್ಕಾರ |
|---|---|---|
| 01 | ದೈನಂದಿನ ಚಟುವಟಿಕೆ | 2,78,200 |
| 02 | ವಿಶೇಷ ಶಿಬಿರಗಳು | 1,39,100 |

## ದೈನಂದಿನ ಚಟುವಟಿಕೆಗಳಿಗೆ ಸ್ವಯಂಸೇವಕರ ಹಂಚಿಕೆ ಮತ್ತು ದಾಖಲಾತಿ

| ಸ್ವಯಂಸೇವಕರ ಹಂಚಿಕೆ | ದಾಖಲಾದ ಸ್ವಯಂಸೇವಕರು | ಸ್ವಯಂ-ಸೇವಕರು | ಸ್ವಯಂ-ಸೇವಕಿಯರು | ಪ.ಜಾ | ಪ.ವರ್ಗ | ಹಿಂ.ವರ್ಗ | ಅಲ್ಪ ಸಂಖ್ಯಾತರು | ಇತರೆ |
|---|---|---|---|---|---|---|---|---|
| 2,78,200 | 6,00,000 | 4,50,000 | 1,50,000 | 1,05,000 | 45,000 | 2,00,214 | 19,750 | 2,30,036 |

## ವಿಶೇಷ ಶಿಬಿರ ಕಾರ್ಯಕ್ರಮಗಳು 2019-20

| ಸ್ವಯಂಸೇವಕರ ಹಂಚಿಕೆ | ಶಿಬಿರದ ಗುರಿ | ಸಾಧನೆ (ಆಯೋಜಿಸಿದ ಶಿಬಿರಗಳು) | ಭಾಗವಹಿಸಿದ ಸ್ವಯಂಸೇವಕರು | | |
|---|---|---|---|---|---|
| | | | ಸ್ವಯಂಸೇವಕರು | ಸ್ವಯಂಸೇವಕಿಯರು | ಒಟ್ಟು |
| 1,39,100 | 3672 (ಸ್ವ ಆರ್ಥಿಕ ಘಟಕಗಳನ್ನು ಒಳಗೊಂಡಂತೆ) | 3,000 | 80,000 | 45,000 | 125000 |

2020-21ನೇ ಸಾಲಿನಲ್ಲಿ ಅನುದಾನವು ಕೋವಿಡ್-19 ಕಾರಣಗಳಿಂದ ಬಿಡುಗಡೆಯಾಗದ ಕಾರಣ ಹಲವಾರು ಆನ್‌ಲೈನ್ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

## ಸ್ವ ಆರ್ಥಿಕ ಘಟಕಗಳು

| | |
|---|---|
| 890 ಸ್ವ ಆರ್ಥಿಕ ಘಟಕಗಳು: | 89,000 ಸ್ವಯಂಸೇವಕ/ಸೇವಕಿಯರು |

## ವಿಶ್ವ ವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳು ನೀಡಿದ ವರದಿಯ ಆಧಾರದ ಮೇಲೆ ಕೆಲವು ಮಹತ್ವದ ಸಾಧನೆಗಳು

| | | |
|---|---|---|
| ರಕ್ತ ದಾನ | | 1500 ಕ್ಕೂ ಹೆಚ್ಚಿನ ರಕ್ತದಾನ ಶಿಬಿರಗಳು<br>1,19,270 ಯೂನಿಟ್‌ಗಳ ರಕ್ತದಾನ |
| ಪಲ್ಸ್ ಪೋಲಿಯೋ | | 50,000 ಸ್ವಯಂಸೇವಕ/ಸೇವಕಿಯರು ಭಾಗವಹಿಸಿ, ಸುಮಾರು 3.00 ಲಕ್ಷ ಮಕ್ಕಳಿಗೆ ಲಸಿಕೆ ಹಾಕಲಾಗಿದೆ. |
| ಒಟ್ಟು ನೆಟ್ಟ ಗಿಡಗಳ ಸಂಖ್ಯೆ | | ಸುಮಾರು 5,73,000 |
| ಉಪಯುಕ್ತ ಆಸ್ತಿ ನಿರ್ಮಾಣ | | ಅಂದಾಜು ರೂ. 15.00 ಕೋಟಿ |
| ವಿಶೇಷ ವಾರ್ಷಿಕ ಶಿಬಿರಗಳು | | 3000 |
| ಆರೋಗ್ಯ ಶಿಬಿರಗಳು | | 1600 (ರಕ್ತದಾನ ಶಿಬಿರ ಸೇರಿ) |
| ಅರಿವು ಮೂಡಿಸುವ ಜಾಥಾ ಮತ್ತು ಶಿಬಿರಗಳು | | 8000 |
| ರಾಷ್ಟ್ರ ಮಟ್ಟದ ಶಿಬಿರಗಳು | | 13 |
| ರಾಜ್ಯ ಮಟ್ಟದ ಶಿಬಿರಗಳು | | 7 |
| ಜಿಲ್ಲಾ ಮತ್ತು ವಿಶ್ವ ವಿದ್ಯಾನಿಲಯ ಮಟ್ಟದ ಶಿಬಿರಗಳು | | 78 |

2020-21ನೇ ಸಾಲಿನಲ್ಲಿ ಅನುದಾನವು ಕೋವಿಡ್ -19 ಕಾರಣಗಳಿಂದ ಬಿಡುಗಡೆಯಾಗದ ಕಾರಣ ಹಲವಾರು ಆನ್‌ಲೈನ್ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

## ವಿಶ್ವ ವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳಗೆ ಸ್ವಯಂಸೇವಕರ ಹಂಚಿಕೆ

| ಕ್ರಂ. ಸಂ. | ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ ಹೆಸರು | ಸ್ವಯಂಸೇವಕರ ಸಂಖ್ಯೆ | |
|---|---|---|---|
| | | ದೈನಂದಿನ ಕಾರ್ಯಕ್ರಮ | ವಿಶೇಷ ಶಿಬಿರಗಳು |
| 01. | ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | 80000 | 40000 |
| 02. | ಉದ್ಯೋಗ ಮತ್ತು ತರಬೇತಿ, ಬೆಂಗಳೂರು. | 00000 | 00000 |
| 03. | ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | 10000 | 5000 |
| 04. | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿ., ಬೆಂಗಳೂರು. | 2000 | 1000 |
| 05. | ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. | 7000 | 3500 |
| 06. | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ., ಬೆಂಗಳೂರು. | 17500 | 8750 |
| 07. | ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | 18000 | 9000 |
| 08. | ವಿಶ್ವವಿದ್ಯಾನಿಲಯ, ಹಂಪನಕಟ್ಟಾ, ಮಂಗಳೂರು. | 15000 | 7500 |
| 09. | ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ. | 13000 | 6500 |
| 10. | ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ | 14750 | 7375 |
| 11. | ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ | 11000 | 5500 |
| 12. | ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ | 10000 | 5000 |
| 13. | ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. | 12000 | 6000 |
| 14. | ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | 9000 | 4500 |
| 15. | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ. | 9000 | 4500 |
| 16. | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ. | 8000 | 4000 |
| 17. | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾಂ. | 5500 | 2750 |
| 18. | ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ. | 3500 | 1750 |
| 19 | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ಬೆಂಗಳೂರು. | 2500 | 1250 |
| 20. | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ಧಾರವಾಡ. | 2500 | 1250 |
| 21. | ಕೆ.ಎಲ್.ಇ. ವಿಶ್ವವಿದ್ಯಾನಿಲಯ, ಬೆಳಗಾವಿ. | 1200 | 600 |
| 22. | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ರಾಯಚೂರು. | 600 | 300 |
| 23. | ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾನಿಲಯ, ಬಾಗಲಕೋಟೆ. | 1800 | 900 |
| 24. | ತೋಟಗಾರಿಕೆ ವಿಜ್ಞಾನ್ ವಿಶ್ವವಿದ್ಯಾನಿಲಯ, ಶಿವಮೊಗ್ಗ. | 1000 | 500 |
| 25. | ಕ.ರಾ. ಪಶುವೈದ್ಯ, ಪ್ರಾಣಿ, ಮತ್ತು ಮೀ., ವಿಜ್ಞಾನ ವಿವಿ, ಬೀದರ್. | 1000 | 500 |
| 26. | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಚಾಮರಾಜಪೇಟೆ. | 1000 | 500 |
| 27. | ನಿಟ್ಟೇ ವಿಶ್ವವಿದ್ಯಾನಿಲಯ, ಮಂಗಳೂರು. | 1000 | 500 |
| 28. | ಯೆನೆಪೋಯ ವಿಶ್ವವಿದ್ಯಾನಿಲಯ, ಮಂಗಳೂರು. | 1000 | 500 |
| 29. | ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈ.ಎ. & ರಿಸರ್ಚ್ ಮೈಸೂರು. | 450 | 225 |
| 30. | ಶ್ರೀ ಸಿದ್ಧಾರ್ಥ ವಿಶ್ವವಿದ್ಯಾನಿಲಯ, ತುಮಕೂರು. | 100 | 50 |
| 31. | ಶ್ರೀ ದೇವರಾಜ ಅರಸ್ ಅಕಾಡೆಮಿ ಆಫ್ ಹೈ.ಎ. & ರಿಸರ್ಚ್, ಕೋಲಾರ. | 200 | 100 |
| 32. | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.. | 200 | 100 |
| 33. | ಕ.ರಾ.ಡಾ.ಗಂ.ಹಾನಗಲ್ ಮ್ಯೂ.ಅಂಡ್ ಪ.ಆರ್ಟ್ಸ್ ವಿವಿ, ಮೈಸೂರು, | 100 | 50 |

| | | | |
|---|---|---|---|
| 34. | ನಿಮ್ಹಾನ್ಸ್, ಕಾಲೇಜ್ ಆಫ್ ನರ್ಸಿಂಗ್, ಬೆಂಗಳೂರು | 100 | 50 |
| 35. | ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ, ಬೆಂಗಳೂರು | 8600 | 4300 |
| 36. | ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ, ಕೋಲಾರ | 6000 | 3000 |
| 37. | ಬಿ.ಎಲ್.ಡಿ.ಇ. ವಿಶ್ವವಿದ್ಯಾನಿಲಯ, ವಿಜಯಪುರ | 200 | 100 |
| 38. | ಗಾರ್ಡನ್ ಸಿಟಿ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 39. | ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೊಡಿ, ಹಾವೇರಿ | 300 | 150 |
| 40. | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾನಿಲಯ, ಉಜಿರೆ | 600 | 300 |
| 41. | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರು | 400 | 200 |
| 42. | ಜೈನ್ ವಿಶ್ವವಿದ್ಯಾನಿಲಯ, ಬೆಂಗಳೂರು | 200 | 100 |
| 43. | ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ, ಮಂಡ್ಯ | 600 | 300 |
| 44. | ಎನ್.ಐ.ಟಿ.ಕೆ , ಸುರತ್ಕಲ್ , ಕರ್ನಾಟಕ | 100 | 50 |
| 45. | ಗೀತಂ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 46. | ಎಸ್ ವ್ಯಾಸ್ ವಿಶ್ವವಿದ್ಯಾನಿಲಯ, ಜಿಗಣಿ, ಆನೆಕಲ್ | 100 | 50 |
| 47. | ಪ್ರೆಸಿಡೆನ್ಸಿ ವಿಶ್ವವಿದ್ಯಾನಿಲಯ, ಬೆಂಗಳೂರು | 300 | 150 |
| 48. | ದಯಾನಂದ ಸಾಗರ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 49. | ರೇವ ವಿಶ್ವವಿದ್ಯಾನಿಲಯ, ಬೆಂಗಳೂರು | 200 | 100 |
| 50. | ಶರಣಬಸವ ವಿಶ್ವವಿದ್ಯಾನಿಲಯ, ಕಲಬುರ್ಗಿ | 100 | 50 |
| 51. | ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ | 100 | 50 |
| 52. | ಮೌಲಾನ ಆಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| | **ಒಟ್ಟು :** | **2,78,200** | **1,39,100** |
| | ಸ್ವ-ಆರ್ಥಿಕ ಘಟಕಗಳು | | |
| 53. | ಮಂಡ್ಯ ವಿಶ್ವವಿದ್ಯಾನಿಲಯ, ಮಂಡ್ಯ | 1 ಘಟಕ | |
| 54. | ಸಿ.ಎಂ.ಆರ್. ವಿಶ್ವವಿದ್ಯಾನಿಲಯ, ಬೆಂಗಳೂರು | 1 ಘಟಕ | |
| 55. | ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾನಿಲಯ, ಹುಬ್ಬಳ್ಳಿ | 1 ಘಟಕ | |
| 56. | ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಧಾರವಾಡ | 1 ಘಟಕ | |

**2020-21ನೇ ಸಾಲಿನಲ್ಲಿ ಅನುದಾನವು ಕೋವಿಡ್-19 ಕಾರಣಗಳಿಂದ ಬಿಡುಗಡೆಯಾಗದ ಕಾರಣ ಹಲವಾರು ಆನ್‌ಲೈನ್ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.**

## 2019-20 ನೇ ಸಾಲಿನ ಮುಖ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳು

### ನಿರಂತರ ಸ್ವಚ್ಛತಾ ಚಟುವಟಿಕೆಗಳು

ಭಾರತ ಸರ್ಕಾರದ ಸ್ವಚ್ಛ ಭಾರತ ಯೋಜನೆಯನ್ವಯ 48 ವಿಶ್ವವಿದ್ಯಾನಿಲಯಗಳು ಮತ್ತು 4 ನಿರ್ದೇಶನಾಲಯಗಳಿಂದ ಸುಮಾರು 2,00,000 ಸ್ವಯಂಸೇವಕರಿಗೆ ಸ್ವಚ್ಛತಾ ಪ್ರತಿಜ್ಞೆಯನ್ನು ನೀಡಿಲಾಗಿದೆ. ವಿಶ್ವವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳ ಸುಮಾರು 1,20,000 ಸ್ವಯಂಸೇವಕರನ್ನು ಒಳಗೊಂಡ 1500 ರ್‍ಯಾಲಿಗಳನ್ನು ಆಯೋಜಿಸಿ ಜನರಲ್ಲಿ ಸ್ವಚ್ಛತೆಯ ಸಂದೇಶವನ್ನು ಹರಡಿರುತ್ತಾರೆ. ಅಲ್ಲದೆ ಒಂದು ದಿನದ ಸ್ವಚ್ಛತಾ ಕಾರ್ಯಕ್ರಮವನ್ನು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಏರ್ಪಡಿಸಲಾಗಿದೆ. ಹಲವು ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರೇ ಕ್ಯಾಂಪಸ್‌ಗಳಲ್ಲಿ ನಿರಂತರ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.






### ಅಂತರರಾಷ್ಟ್ರೀಯ ಯೋಗ ದಿನಾಚರಣೆ

ರಾಷ್ಟ್ರೀಯ ಸೇವಾ ಯೋಜನೆ ಪ್ರಾದೇಶಿಕ ಕೇಂದ್ರ, ಭಾರತ ಸರ್ಕಾರ, ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಬೆಂಗಳೂರು ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ದಿನಾಂಕ 19.06.2019 ರಿಂದ 21.06.2019 ರವರೆಗೆ ಶ್ರೀ ಧರ್ಮಸ್ಥಳ ಮಂಜುನಾಥ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ, ಉಜಿರೆಯಲ್ಲಿ ಕರ್ನಾಟಕ ರಾಜ್ಯದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರಿಗಾಗಿ ಹಮ್ಮಿಕೊಳ್ಳಲಾಯಿತು. 30 ವಿಶ್ವವಿದ್ಯಾನಿಲಯ ಮತ್ತು 4 ನಿರ್ದೇಶನಾಲಯಗಳಿಂದ 1500 ಸ್ವಯಂಸೇವಕರು ಮತ್ತು 300 ಕಾರ್ಯಕ್ರಮ ಅಧಿಕಾರಿಗಳು ಆರೋಗ್ಯದಲ್ಲಿ ಯೋಗದ ಪಾತ್ರ ಎಂಬ ವಿಷಯದ 3 ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅಲ್ಲದೆ ಎಲ್ಲಾ ವಿಶ್ವವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳು ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿವೆ. ಮೈಸೂರು ವಿಶ್ವವಿದ್ಯಾನಿಲಯವು ಮೈಸೂರಿನ ರೇಸ್ ಕೋರ್ಸ್ ಕ್ರೀಡಾಂಗಣದಲ್ಲಿ ಬೃಹತ್ ಯೋಗ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿರುವುದು ಉಲ್ಲೇಖಾರ್ಹ.





# ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆ

ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯು ದಿನಾಂಕ 02.07.2019 ರಂದು ಕೊಠಡಿ ಸಂಖ್ಯೆ.318, ವಿಕಾಸ ಸೌಧದಲ್ಲಿ ಮಾನ್ಯ ಶ್ರೀ ರಹೀಂ ಖಾನ್, ಮಾನ್ಯ ಮಂತ್ರಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ 2019–20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ 2019–20ನೇ ಸಾಲಿನಲ್ಲಿ ನಡೆಸುವ ಚಟುವಟಿಕೆಗಳ ಬಗ್ಗೆ ತೀರ್ಮಾನಿಸಲಾಯಿತು. ಅದರಂತೆ, (1) ದೈನಂದಿನ ಮತ್ತು ವಿಶೇಷ ಶಿಬಿರದ ಚಟುವಟಿಕೆಗಳ ಬಗ್ಗೆ (2) ಲೆಕ್ಕ ಪತ್ರಗಳ ಸಲ್ಲಿಸುವಿಕೆ (3) ಸ್ವ–ಆರ್ಥಿಕ ಘಟಕಗಳ ಸ್ಥಾಪನೆ ಬಗ್ಗೆ (4) ಕಾರ್ಯಕ್ರಮ ಸಂಯೋಜನಾಧಿಕಾರಿಗಳನ್ನು ನೇಮಿಸುವ ಬಗ್ಗೆ ಹಾಗೂ (5) ಮೈಸೂರಿನಲ್ಲಿ ನಡೆಯುವ ಇ.ಟಿ.ಐ. ತರಬೇತಿಗೆ ಕಾರ್ಯಕ್ರಮಾಧಿಕಾರಿಗಳನ್ನು ನಿಯೋಜಿಸುವ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ, ಸ್ವಯಂಸೇವಕರ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಜಿಲ್ಲೆಗೆ ಒಟ್ಟು 20 ಶಾಲೆಗಳಂತೆ ರಾಜ್ಯದ ಪ್ರೌಢ ಶಾಲೆಗಳಿಗೂ ಸಹ ರಾಷ್ಟ್ರೀಯ ಸೇವಾ ಯೋಜನೆಯನ್ನು ರಾಜ್ಯ ಸರ್ಕಾರದ ಅನುದಾನದಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಆಧಾರವಾಗಿಟ್ಟುಕೊಂಡು ವಿಸ್ತರಿಸಲು ನಿರ್ಧರಿಸಲಾಯಿತು.







# ಸಂಯೋಜನಾಧಿಕಾರಿಗಳ ಸಭೆ:

ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿಗಳ ಸಭೆಯು ದಿನಾಂಕ 20.05.2019 ರಂದು ಡಾ. ಜಿ ಕಲ್ಪನಾ, ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಬಹುಮಹಡಿ ಕಟ್ಟಡದಲ್ಲಿ 2019–20ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ ನಡೆಯಿತು. ಸದರಿ ಸಭೆಯಲ್ಲಿ ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್.ಪ್ರಾದೇಶಿಕ ಕೇಂದ್ರ, ಭಾರತ ಸರ್ಕಾರ ರವರು ರಾಜ್ಯದಲ್ಲಿ ಎನ್.ಎಸ್.ಎಸ್. ಚಟುವಟಿಕೆ ಬಗ್ಗೆ ವಿವರಿಸಿದರು. 2019–20ನೇ ಸಾಲಿನಲ್ಲಿ ಒಟ್ಟು 2 ಸಂಯೋಜನಾಧಿಕಾರಿಗಳ ಸಭೆಯನ್ನು ನಡೆಸಲಾಗಿದೆ ಹಾಗೂ ಪಬ್ಲಿಕ್ ಫೈನಾನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಈಒಖ) ಬಗ್ಗೆ 2 ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿತ್ತು.





## ಕರ್ನಾಟಕ ಸರ್ಕಾರದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಆಯೋಜನೆ

2019-20 ರಲ್ಲಿ ಒಟ್ಟು 11 ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳನ್ನು (1) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು., (2) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು., (3) ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ., (4) ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ., (5) ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ., (6) ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ., (7) ಜೆ.ಎಸ್.ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್, ಮೈಸೂರು., (8) ನಿಟ್ಟೆ ವಿಶ್ವವಿದ್ಯಾನಿಲಯ, ಮಂಗಳೂರು., (9) ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ (10) ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು (11) ಮೌಂಟ್ ಕಾರ್ಮಲ್ ಕಾಲೇಜು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ಆಯೋಜಿಸಲಾಯಿತು.












ಸದರಿ ಕಾರ್ಯಕ್ರಮಕ್ಕಾಗಿ ಬೇರೆ ರಾಜ್ಯಗಳಿಂದ 605 ಸ್ವಯಂಸೇವಕ ಸೇವಕಿಯರು (ಗುಜರಾತ್, ಒರಿಸ್ಸಾ, ಕೇರಳ, ತೆಲಂಗಾಣ ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಾಸ್ಥಾನ, ಗೋವಾ, ಪಾಂಡಿಚೇರಿ, ಮತ್ತು ನವದೆಹಲಿ) ಮತ್ತು ನಮ್ಮ ರಾಜ್ಯ ವಿ.ವಿ.ಗಳಿಂದ 1045 ಸ್ವಯಂಸೇವಕ/ಸೇವಕಿಯರು ಒಟ್ಟು 1650 ಸ್ವಯಂಸೇವಕ/ಸೇವಕಿಯರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಸದರಿ ಶಿಬಿರಗಳಲ್ಲಿ ವ್ಯಕ್ತಿತ್ವ ವಿಕಸನ, ಮುಂದಾಳತ್ವದ ಗುಣ, ಭಾವೈಕ್ಯತೆ, ಜೀವನ ಕೌಶಲ್ಯ, ಯೋಗ ಕಾರ್ಯಕ್ರಮ, ಮಹಿಳೆಯರ ಆತ್ಮ ರಕ್ಷಣೆ, ಗಾಂಧೀ ಜೀವನ ಮೌಲ್ಯ, ಸ್ವಾಮಿ ವಿವೇಕಾನಂದರ ಆದರ್ಶಗಳು, ಆರ್ಥಿಕವಾಗಿ ಹಿಂದುಳಿದವರ ಸಬಲೀಕರಣ ಹಾಗೂ ರಾಷ್ಟ್ರ ನಿರ್ಮಾಣದ ಬಗ್ಗೆ ಕಾರ್ಯಾಗಾರಗಳನ್ನು ಮತ್ತು ದತ್ತು ತೆಗೆದುಕೊಂಡ ಗ್ರಾಮಗಳಲ್ಲಿ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮಕ್ಕಾಗಿ ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಡಿ 49.50 ಲಕ್ಷ ರೂಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿಲಾಗಿತ್ತು.

## ಗಣರಾಜ್ಯೋತ್ಸವ ಪಥಸಂಚಲನ ಶಿಬಿರ

ರಾಜ್ಯಗಣರಾಜ್ಯೋತ್ಸವ ಪಥಸಂಚಲನ ರಾಜ್ಯ ಮಟ್ಟದ ಸ್ವಯಂ ಸೇವಕರ ಆಯ್ಕೆ ಶಿಬಿರವನ್ನು ದಿನಾಂಕ 14.10.2019 ರಿಂದ 18.10.2019 ರವರೆಗೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಯಿತು. ರಾಜ್ಯ ವಿವಿಧ ವಿಶ್ವವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳಿಂದ 300 ಸ್ವಯಂಸೇವಕ/ಸೇವಕಿಯರು ಸಂದರ್ಶನಕ್ಕೆ ಭಾಗವಹಿಸಿದ್ದರು. ಅದರಲ್ಲಿ ಆಯ್ಕೆಯಾದ 33 ಸ್ವಯಂಸೇವಕರು ಮತ್ತು 33 ಸ್ವಯಂಸೇವಕಿಯರಿಗೆ ದಿನಾಂಕ 14.01.2020 ರಿಂದ 25.05.2020 ರವರೆಗೆ ವಿಶ್ವೇಶ್ವರಯ್ಯತಾಂತ್ರಿಕ ವಿಶ್ವವಿದ್ಯಾನಿಲಯ ಬೆಳಗಾಂ ಇವರ ವ್ಯಾಪ್ತಿಯಲ್ಲಿ ಬರುವ ಬಿ.ಎಂ.ಎಸ್. ಮಹಾ ವಿದ್ಯಾಲಯದಲ್ಲಿ ಪಥಸಂಚಲನದಲ್ಲಿ ತರಬೇತಿಯನ್ನು ನೀಡಿ ದಿನಾಂಕ:26.01.2020 ರಂದು ಸದರಿ ಸ್ವಯಂ ಸೇವಕರು/ಸೇವಕೀಯರು ಮಾಣೆಕ್‌ಷಾ ಪೆರೇಡ್ ಮೈದಾನದಲ್ಲಿ ನಡೆದ ರಾಜ್ಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿರುತ್ತಾರೆ. ರಾಷ್ಟ್ರೀಯ ಸೇವಾ ಯೋಜನಾ ತಂಡವು ರಾಜ್ಯದ ದ್ವಿತೀಯ ಬಹುಮಾನವನ್ನು ಗಳಿಸಿದೆ. 10 ಸ್ವಯಂಸೇವಕ/ಸೇವಕಿಯರು ಮತ್ತು ಒಬ್ಬರು ಕಾರ್ಯಕ್ರಮ ಅಧಿಕಾರಿ ನವದೆಹಲಿಯಲ್ಲಿ ದಿನಾಂಕ 26.01.2020 ರಂದು ನಡೆದ ರಾಷ್ಟ್ರಗಣರಾಜ್ಯೋತ್ಸವ  ಪಥಸಂಚಲನದಲ್ಲಿ ಭಾಗವಹಿಸಿರುತ್ತಾರೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ ಪ್ರಾದೇಶಿಕ ಕೇಂದ್ರದ ಮಾರ್ಗದರ್ಶನದಲ್ಲಿ ದಕ್ಷಿಣಭಾರತ ಮಟ್ಟದ ಆಯ್ಕೆ ಶಿಬಿರವನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಆಯೋಜಿಸಿದೆ.







## 31.10.2019 ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತಾ ದಿವಸ್" ಕಾರ್ಯಕ್ರಮದ ಆಚರಣೆ.

ದಿವಂಗತ ಸರ್ದಾರ್ ವಲ್ಲಭಾಯಿ ಪಟೇಲ್ ಇವರ ಜನ್ಮ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತ ದಿವಸ್" ಕಾರ್ಯಕ್ರಮವನ್ನು ದಿನಾಂಕ 31.10.2019 ರಂದು ರಾಷ್ಟ್ರೀಯ ಸೇವಾ ಯೋಜನಾ ಕೋಶವು ರಾಜ್ಯ ಸರ್ಕಾರದ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಕಾರದೊಂದಿಗೆ ಆಚರಿಸಲಾಯಿತು.













## ಜೀವನ ಕೌಶಲ್ಯ ಶಿಕ್ಷಣ ಮತ್ತು ಆಪ್ತ ಸಲಹೆ ತರಬೇತಿ

2016-17ನೇ ಸಾಲಿನಿಂದ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಘೋಷಿಸಿದಂತೆ ಜೀವನಕೌಶಲ್ಯ, ಶಿಕ್ಷಣ ಮತ್ತು ಆಪ್ತ ಸಲಹೆ ತರಬೇತಿಯನ್ನು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಯಿತು. 2019-20ನೇ ಸಾಲಿನಲ್ಲಿ ಮುಂದುವರೆಸಿ ಈವರೆಗೆ 2666 ಕಾರ್ಯಕ್ರಮ ಅಧಿಕಾರಿಗಳಿಗೆ ತರಬೇತಿ ನೀಡಿದ್ದು ಸದರಿ ಕಾರ್ಯಕ್ರಮ ಅಧಿಕಾರಿಗಳು ಅನೇಕ ಗುಂಪುಗಳ ಮೂಲಕ 3,79,172 ಎನ್.ಎಸ್.ಎಸ್ ಸ್ವಯಂ ಸೇವಕರಿಗೆ/ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ 100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.







## ಮಹಾತ್ಮಗಾಂಧೀಜಿಯವರ ಜನ್ಮ ದಿನೋತ್ಸವದ ಅಂಗವಾಗಿ ಕಾರ್ಯಕ್ರಮ

- ಶಾಲೆಯಿಂದ ಶಾಲೆಗೆ ಗಾಂಧಿ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಮತ್ತು ಅನುದಾನಿತ 55 ಶಿಕ್ಷಣ ಸಂಸ್ಥೆಗಳಲ್ಲಿ ಬಾ/ಬಾಪು ಪ್ರಣಿತ ವಿಚಾರಗೋಷ್ಠಿಗಳು.

- ಕ್ಯಾಂಪಸ್ ಟು ಕಮ್ಯುನಿಟಿ ಸಹಭಾಗಿತ್ವದಲ್ಲಿ 150 ಸರ್ಕಾರಿ ಪ್ರಾಥಮಿಕ ಶಾಲೆಗಳ ನವೀಕರಣ ಪೇಂಟ್ ಮತ್ತು ಬ್ರಷ್ ಮತ್ತು ಇತರ ಸಾಮಗ್ರಿ ಖರೀದಿಸುವುದು.

- 150 ಗಾಂಧಿ ಸಾಹಿತ್ಯ ಕೃತಿಗಳ ಪ್ರಕಟಣೆ.

- ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಗಾಗಿ ಕ್ವಿಜ್. ಮತ್ತು ಪ್ರಬಂಧ ಸ್ಪರ್ಧೆ.

- ಜಿಲ್ಲಾ ಪ್ರಾತಿನಿಧ್ಯವಾರು 25 ಪ್ರಥಮ ದರ್ಜೆ ಕಾಲೇಜುಗಳಲ್ಲಿ ತತ್ವ ಪ್ರಣೀತ ವಿಚಾರ, 1 ದಿನದ ವಿಚಾರ ಸಂಕಿರಣ ಕಾರ್ಯಕ್ರಮ.

ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲು ಗಾಂಧೀ ಭವನ, ಕರ್ನಾಟಕ ಗಾಂಧೀ, ಸ್ಮಾರಕ ನಿಧಿ ಬೆಂಗಳೂರು ಇವರಿಗೆ ರಾಜ್ಯ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಡಿ ರೂ 20 ಲಕ್ಷಗಳನ್ನು ಬಿಡುಗಡೆ ಮಾಡಿದೆ.














## ಸಂವಿಧಾನ ಶಿಲ್ಪಿ ಡಾ ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನ

ಸಂವಿಧಾನ ಶಿಲ್ಪಿ ಡಾ ಬಿ.ಆರ್.ಅಂಬೇಡ್ಕರ್‌ರವರ ತತ್ವಗಳ ಪ್ರಚಾರ ಅಭಿಯಾನದ ಅಂಗವಾಗಿ 'ಸಂವಿಧಾನದ ಓದು' ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು 20 ವಿಶ್ವವಿದ್ಯಾನಿಲಯ/ಕಾಲೇಜುಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಸದರಿ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೊಡಿ ಇವರ ನೇತೃತ್ವದಲ್ಲಿ ನಡೆಸಲಾಯಿತು. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಡಿ ರೂ. 12.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.




















# ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ

ರಾಜ್ಯ ಸರ್ಕಾರದ ಅನುದಾನದಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯ, ಗುಲ್ಬರ್ಗ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆಗಳಲ್ಲಿ ಯುವಜನೋತ್ಸವಗಳನ್ನು ಆಚರಿಸಲು ಮತ್ತು ತಲಾ ರೂ.8.00 ಲಕ್ಷಗಳಂತೆ ಒಟ್ಟು ರೂ.16.00 ಲಕ್ಷಗಳನ್ನು ಮೇಲಿನ ವಿಶ್ವವಿದ್ಯಾನಿಲಯಗಳಿಗೆ ಬಿಡುಗಡೆ ಮಾಡಿದೆ.










## ಸಾಹಸ ಶಿಬಿರ

ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರ/ಸೇವಕಿಯರು ಪ್ರಕೃತಿಯಲ್ಲಿ ಬರುವ ಕಠಿಣತರವಾದ ಸನ್ನಿವೇಶಗಳನ್ನು ಧೈರ್ಯದಿಂದ ಮತ್ತು ತಾಳ್ಮೆಯಿಂದ ಎದುರಿಸುವ ಮನೋಧೈರ್ಯವನ್ನುಂಟು ಮಾಡಲು ಜನರಲ್ ತಿಮ್ಮಯ್ಯ ಸಾಹಸ ಅಕಾಡೆಮಿ ಮುಖಾಂತರ ಸಾಹಸ ಶಿಬಿರಗಳನ್ನು ರೂ.50.00 ಲಕ್ಷಗಳ ವೆಚ್ಚದಲ್ಲಿ ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಂದಲೂ ಸಹ ಉತ್ತೇಜನಕಾರಿಯಾದ ಅಭಿಪ್ರಾಯಗಳು ವ್ಯಕ್ತವಾಗಿವೆ. ಈವರೆಗೆ 25 ಶಿಬಿರಗಳನ್ನು ನಡೆಸಲಾಗಿದೆ.











## ಫ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ವಿಸ್ತರಣೆ

ಸಾರ್ವಜನಿಕ ಶಿಕ್ಷಣದ ಸಹಕಾರದೊಂದಿಗೆ ದೇಶದಲ್ಲೆ ಮೊದಲ ಬಾರಿಗೆ ಫ್ರೌಢಶಾಲೆಗಳ 8 ಮತ್ತು 9 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಸೇವಾ ಯೋಜನೆಯನ್ನು ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಿಗೆ ವಿಸ್ತರಿಸಿದೆ ಪ್ರತಿಜಿಲ್ಲೆಗೆ 20 ಶಾಲೆಗಳಂತೆ ಒಟ್ಟು 680 ಶಾಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಅನುಷ್ಠಾನಗೊಳಿಸಿ 68,000 ವಿದ್ಯಾರ್ಥಿಗಳನ್ನು ನೋಂದಾಯಿಸಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನಕ್ಕಾಗಿ ಶಾಲೆಗೊಬ್ಬರು ಕಾರ್ಯಕ್ರಮಾಧಿಕಾರಿಯನ್ನು ನಿಯೋಜಿಸಿ, ಸದರಿ ಕಾರ್ಯಕ್ರಮಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗಿದೆ. ಸರಳ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಸೇವಾ ಮನೋಬಾವನೆ ಬೆಳಸಿ ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತಹ  ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಹಲವಾರು ನೈತಿಕ ಮೌಲ್ಯ, ಶಿಸ್ತುಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರ ಮುಖೇನ ಅವರಲ್ಲಿ ಧನಾತ್ಮಕ ಚಿಂತನೆಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ.  ರಾಜ್ಯ ಮಟ್ಟದಲ್ಲಿ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯ ಅನುಷ್ಠಾನ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳನ್ನು ಜಿಲ್ಲೆಯ ನೋಡೆಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ. ಒಟ್ಟಿನಲ್ಲಿ ರಾಜ್ಯದಲ್ಲಿ ಫ್ರೌಢಶಾಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿರುವುದು ಶ್ಲಾಘನೀಯ ವಿಷಯ.













ಭಾರತ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮವಾದ 6 ಮಾದಕ ವಸ್ತು ಅರಿವು ಕಾರ್ಯಕ್ರಮಗಳನ್ನು ಮತ್ತು ಗಾಂಧೀಜಿ ಪ್ರಚಾರ ಅಭ್ಯಯನವನ್ನು ಹಮ್ಮಿಕೊಳ್ಳಲಾಯಿತು ಬಹಳ ಆಸಕ್ತಿಯಿಂದ ವಿದ್ಯಾರ್ಥಿಗಳು ಭಾಗವಹಿಸಿದರು.













## ರಾಷ್ಟ್ರೀಯ ಸೇವಾ ಯೋಜನೆಯನ್ನು ಕ್ರೀಡಾ ವಸತಿಶಾಲೆಗಳಿಗೆ ವಿಸ್ತರಣೆ

ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರ ನೊಂದಣಿಯನ್ನು ಹೆಚ್ಚಿಸುವ ಸಲುವಾಗಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 34 ಕ್ರೀಡಾ ವಸತಿಶಾಲೆಗಳಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ವಿಸ್ತರಿಸಲಾಗಿದೆ.



## ಶಾಲಾ ಆರೋಗ್ಯ ಕಾರ್ಯಕ್ರಮ

ರಾಜೀವ ಗಾಂಧೀ ಆರೋಗ್ಯ ವಿಶ್ವವಿದ್ಯಾನಿಲಯದ ನೇತೃತ್ವದಲ್ಲಿ ಬೆಂಗಳೂರಿನ ವೈದ್ಯಕೀಯ ಶಿಕ್ಷಣ ಕಾಲೇಜುಗಳು ಮತ್ತು ಶ್ರೀ ಸತ್ಯಸಾಯಿ ಆರೋಗ್ಯ ಶಿಕ್ಷಣ ಟ್ರಸ್ಟಿನ ಸಹಯೋಗದಲ್ಲಿ ಶಾಲಾ ಮಕ್ಕಳ ಆರೋಗ್ಯ ತಪಾಸಣಾ ಮತ್ತು ಸ್ವಚ್ಛತೆ ಕಾರ್ಯಕ್ರಮವನ್ನು ಚಿಕ್ಕಬಳ್ಳಾಪುರ ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಸಲಾಗಿದೆ. 1700 ಸರ್ಕಾರಿ ಶಾಲೆಗಳ 169638 ವಿದ್ಯಾರ್ಥಿಗಳು ಇದರ ಫಲಾನುಭವಿಗಳಾಗಿದ್ದಾರೆ. ಜೂನ್ 6 2018ರಲ್ಲಿ ಅನುಷ್ಠಾನಗೊಂಡ ಈ ಕಾರ್ಯಕ್ರಮದಲ್ಲಿ ಇದುವರೆಗೆ 21385 ಶಾಲಾ ಮಕ್ಕಳನ್ನು ತಪಾಸಣೆ ಮಾಡಲಾಗಿದೆ. 9 ವಿಶೇಷ ಶಿಬಿರಗಳನ್ನು ನಡೆಸಲಾಗಿದೆ. ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಗೂ ವಿಸ್ತರಿಸುವ ಬಗ್ಗೆ ಚಿಂತಿಸಲಾಗುತ್ತಿದೆ.









# ಪ್ರಕೃತಿ ವಿಕೋಪ ಕಾರ್ಯಾಚರಣೆ

ಪ್ರಕೃತಿ ವಿಕೋಪ ವೇಳೆಯಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಿಂದ ೮೦,೦೦೦ ಸ್ವಯಂ ಸೇವಕರು ಭಾಗವಹಿಸಿ ರೂ. 1.26 ಕೋಟಿ ಸಂಗ್ರಹಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಜಮಾ ಮಾಡಿದ್ದಾರೆ ಮತ್ತು ರೂ.25ಲಕ್ಷ ಮೌಲ್ಯದ ಸಾಮಗ್ರಿಗಳನ್ನು ವಿತರಿಸಿದ್ದಾರೆ.















## ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭ

ರಾಷ್ಟ್ರೀಯ ಸೇವಾ ಯೋಜನೆಯು 1969 ಸೆಪ್ಟೆಂಬರ್ 24ರಂದು ಜಾರಿಗೊಂಡಿದ್ದು ಇಂದಿಗೆ 50 ವರ್ಷಗಳನ್ನು ಪೂರೈಸಿದೆ. 2018ರ ಸೆಪ್ಟೆಂಬರ್‌ನಿಂದ -2019 ಸೆಪ್ಟೆಂಬರ್‌ವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ಎಲ್ಲಾ ಕಾರ್ಯಕ್ರಮಗಳನ್ನು ಸುವರ್ಣ ಮಹೋತ್ಸವದ ಹೆಸರಿನಲ್ಲಿ ನಡೆಸಿದ್ದು, ಸಮಾರೋಪ ಸಮಾರಂಭದ ಅಂಗವಾಗಿ ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳು ಸುವರ್ಣ ಮಹೋತ್ಸವದ ನೆನಪಿಗಾಗಿ ವರ್ಷಾದ್ಯಂತ ಹಲವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು 24.09.2019ರಂದು ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭವನ್ನು ಗಾಂಧಿಭವನ, ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಯಿತು.










## ಮತದಾನ ಜಾಗೃತಿ ಕಾರ್ಯಕ್ರಮ

ರಾಜ್ಯ ಚುನಾವಣಾ ಆಯೋಗ ಮತ್ತು ವಿವಿಧ ಜಿಲ್ಲಾಡಳಿತಗಳ ಆಹ್ವಾನದ ಮೇರೆಗೆ ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳ ನೆರವಿನಿಂದ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಬೀದಿ ನಾಟಕ, ಜಾಥಾ, ಮನೆ ಮನೆ ಭೇಟಿಗಳ ಮೂಲಕ ಸ್ವಯಂ ಸೇವಕರು ಜನರಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸಿದರು. ಅಲ್ಲದೆ ಚುನಾವಣಾ ಕರ್ತವ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಸ್ವಯಂ ಸೇವಕರಾಗಿಯೂ ದುಡಿದಿದ್ದಾರೆ. ಇದು






## ಮಾದಕ ವ್ಯಸನ ವಿರುದ್ಧ ಅರಿವು ಮೂಡಿಸುವ ಕಾರ್ಯಕ್ರಮ

ಇಂದು ಮಾದಕ ವ್ಯಸನವು ಯುವ ಜನತೆಯನ್ನು ಕಾಡುವ ಮಹತ್ವದ ಸಮಸ್ಯೆಯಾಗಿದೆ. ಯುವಕರ ನೈತಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಿನ್ನಡೆಗೆ ಇದು ಮೂಲ ಕಾರಣವಾಗಿದೆ. ಇದರಿಂದ ಈ ಪಿಡುಗಿನ ವಿರುದ್ಧ ರಾಷ್ಟ್ರೀಯ ಸೇವಾ ಯೋಜನೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳು ಬೀದಿ ನಾಟಕ, ಜಾಥಾ ಹಾಗೂ  ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಅರಿವು ಮೂಡಿಸುವ ಕಾರ್ಯವನ್ನು ಮಾಡಿವೆ. ರಾಜ್ಯ ಮಟ್ಟದಲ್ಲಿ ಪೋಲಿಸ್ ಇಲಾಖೆ ಹಾಗೂ ವಿವಿಧ ಸರ್ಕಾರೇತರ ಸಂಘಟನೆಗಳೊಂದಿಗೆ ರಾಜ್ಯ ಕೋಶವು 2 ಬೃಹತ್ ಜಾಥಾಗಳನ್ನು ಯೋಜಿಸಿದೆ ಸದರಿ ಜಾಥಾಗಳಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳ 10000ಕ್ಕೂ ಹೆಚ್ಚು ಸ್ವಯಂ ಸೇವಕ/ಸೇವಕಿಯರು ಭಾಗವಹಿಸಿದ್ದು ವಿಶೇಷವಾಗಿದೆ. ಸಮಾಜದ ಗಣ್ಯರು, ಪೋಲಿಸ್ ಅಧಿಕಾರಿಗಳು, ಚಿತ್ರನಟರು ಈ ಜಾಥಾಗಳಲ್ಲಿ ಭಾಗವಹಿಸಿದ್ದಾರೆ.





## ಏಡ್ಸ್ ರೋಗ ತಡಗಟ್ಟುವಿಕೆ ಕಾರ್ಯಕ್ರಮ







## ರಕ್ತದಾನ ಶಿಬಿರ












## ವಿಶ್ವ ಪರಿಸರ ದಿನ








## ಫಿಟ್ ಇಂಡಿಯಾ ಕಾರ್ಯಕ್ರಮ

ವಿಧಾನಸೌಧ ಆವರಣದಲ್ಲಿ ನಡೆದ 'ಫಿಟ್ ಇಂಡಿಯಾ' ಆಂದೋಲನದಲ್ಲಿ ಸುಮಾರು 10,000 ಸ್ವಯಂಸೇವಕರು ಭಾಗವಹಿಸಿದ್ದರು.









## ಕ್ಯಾನ್ಸರ್ ಔಟ್‌ರೀಚ್ ಕಾರ್ಯಕ್ರಮ

ಕ್ಯಾನ್ಸರ್ ರೋಗದ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲು ವಿವಿಧ ಕಾಲೇಜುಗಳ ಮೂಲಕ 25,000 ಸ್ವಯಂ ಸೇವಕರಿಗೆ ತರಬೇತಿ ನೀಡಲಾಗಿದೆ. ಈ ಕಾರ್ಯಕ್ರಮವನ್ನು ಯೆನೊಪೋಯ ವಿಶ್ವವಿದ್ಯಾನಿಲಯ, ಮಂಗಳೂರು ರವರ ಮೂಲಕ ಹಮ್ಮಿಕೊಳ್ಳಲಾಗಿದೆ.










## Youth Exchange Programme,China








## ರಾಷ್ಟ್ರೀಯ ಸೇವಾ ಯೋಜನೆಯನ್ನು ಜಾಲತಾಣದಲ್ಲಿ ಅಳವಡಿಸಿರುವ ಕುರಿತು

ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯ ಚಟುವಟಿಕೆಗಳನ್ನು ರಾಜ್ಯದ ಮತ್ತು ರಾಷ್ಟ್ರದ ಎಲ್ಲಾ ಯುವ ಜನತೆಯು ವೀಕ್ಷಿಸಿ ತಮ್ಮ ಜೀವನದಲ್ಲಿ ಅಳವಡಿಸುವ ಕುರಿತು ವಿಚಾರ ಮಾಡುವಲ್ಲಿ ಅನುಕೂಲವಾಗುವಂತೆ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಬಗ್ಗೆ ಅಗತ್ಯ ಮಾಹಿತಿಯನ್ನು ಎಲ್ಲಾ ಜನ ಸಾಮಾನ್ಯರಿಗೆ ಸುಲಭವಾಗಿ ಒದಗುವಂತೆ ಮಾಡಲು ಪ್ರಚಲಿತದಲ್ಲಿರುವ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಪೇಜ್, ಯೂಟ್ಯೂಬ್ ಚಾನಲ್, ಟ್ವಿಟ್ಟರ್ ಖಾತೆಗಳನ್ನು ಸೃಜಿಸಿದ್ದು, ಇದರಲ್ಲಿ ಸುಮಾರು 1000 ಫಾಲೋವರ್ಸ್ ಇರುತ್ತಾರೆ. ಅಲ್ಲದೆ ರಾಷ್ಟ್ರೀಯ ಸೇವಾ ಯೋಜನಾ ಕೋಶದ ವೆಬ್‌ಸೈಟ್‌ನ್ನು ಸಹಾ ಆರಂಭಿಸಲಾಗಿದೆ. ಇದರಿಂದಲೂ ಸಹಾ ಎಲ್ಲಾ ನಾಗರೀಕರು ವೀಕ್ಷಿಸಬಹುದಾಗಿದೆ.

### ರಾಷ್ಟ್ರೀಯ ಸೇವಾ ಯೋಜನೆಯ ಸಾಮಾಜಿಕ ಜಾಲತಾಣದ ಲಿಂಕ್‌ನ ವಿವರಗಳು:


**ಫೇಸ್‌ಬೇಕ್ ಪೇಜ್:** https://www.facebook.com/NSSGOK1/


**ಯೂಟ್ಯೂಬ್ ಚಾನಲ್:** https://www.youtube.com/channel/UChshxgfp2HffiNVTZslWaYQ


**ಟ್ವಿಟ್ಟರ್ ಖಾತೆ:** https://twitter.com/KarnatakaNss


**ವೆಬ್‌ಸೈಟ್:** https://nss.karnataka.gov.in/

**ಇನ್ಸ್ಟಾಗ್ರಾಮ್:** https://www.instgram.com/nss_karnataka_gok/



## 2020-21ನೇ ಸಾಲಿನ ಕಾರ್ಯಕ್ರಮಗಳು

ಕೋವಿಡ್-19 ಕಾರಣದಿಂದ 2020-21ನೇ ಸಾಲಿನಲ್ಲಿ ದೈನಂದಿನ ಚಟುವಟಿಕೆ ಹಾಗೂ ವಿಶೇಷ ಶಿಬಿರಗಳಿಗೆ ಸಂಬಂಧಿಸಿದಂತೆ ಹೆಚ್ಚು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲು ಸಾಧ್ಯವಾಗಿಲ್ಲ. ಈ ಸಾಲಿನಲ್ಲಿ ಕೋವಿಡ್-19 ಕುರಿತಾದ ಅರಿವು ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ನೀಡಲಾಯಿತು. 2019-20ನೇ ಸಾಲಿನ ಉಳಿಕೆ ಕಾರ್ಯಕ್ರಮಗಳನ್ನು ನಡೆಸಲಾಯಿತು. ಅದರ ವಿವರಗಳು ಈ ರೀತಿ ಇದೆ.

1. ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಶಿಬಿರಗಳನ್ನು ವಿವಿಧ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ನಡೆಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ರವರಿಗೆ ರೂ.37.50ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ರವರು ವಿವಿಧ ವಿಶ್ವವಿದ್ಯಾನಿಲಯಗಳೊಡನೆ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದಾರೆ.
2. 2019-20ನೇ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿಯವರಿಗೆ ಅನುಮೋದನೆ ನೀಡಿದ್ದು ರೂ.15.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ.
3. ಪ್ರಸಕ್ತ ಸಾಲಿನಲ್ಲಿ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಜಿಲ್ಲೆಗೆ 20 ಶಾಲೆಗಳಿಗೆ ರಾಷ್ಟ್ರೀಯ ಸೇವಾ ಯೋಜನೆಯನ್ನು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲು ಶಾಲೆಗೆ ರೂ.10,000/- ರಂತೆ (ಜಿಲ್ಲಾ ಕಾರ್ಯಕ್ರಮ ಸಂಯೋಜನಾಧಿಕಾರಿಗಳಿಗೆ ಮತ್ತು ಶಾಲೆಯ ಕಾರ್ಯಕ್ರಮಾಧಿಕಾರಿಗಳಿಗೆ ಗೌರವಧನದೊಂದಿಗೆ) ರೂ.90.50+62.50+28.00 ಲಕ್ಷಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಿದೆ.
4. ಪ್ರಸಕ್ತ ಸಾಲಿನಲ್ಲಿ ಗಣರಾಜ್ಯೋತ್ಸವದ ಪಥಸಂಚಲನ ಪೂರ್ವಭಾವಿ ತರಬೇತಿಗಾಗಿ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ರವರಿಗೆ ರೂ.04.61ಲಕ್ಷ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿರವರಿಗೆ ರೂ.10.00ಲಕ್ಷಗಳನ್ನು ಅನುದಾನ ಬಿಡುಗಡೆ ಮಾಡಲಾಯಿತು. ಪಥಸಂಚಲನ ತರಬೇತಿ ಶಿಬಿರವನ್ನು ಆಯೋಜಿಸಲಾಯಿತು.
5. ಪ್ರಸಕ್ತ ಸಾಲಿನಲ್ಲಿ ಜೀವನ ಕೌಶಲ್ಯ ತರಬೇತಿ ಮತ್ತು ಆಪ್ತಸಲಹೆ ಕಾರ್ಯಕ್ರಮಕ್ಕಾಗಿ ರೂ.40.00ಲಕ್ಷಗಳ ಅನುದಾನವನ್ನು ನಿಮ್ಹಾನ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ಸಾಲಿನ ಅಂತ್ಯದವರೆಗೆ ರೂ.04.61ಲಕ್ಷ ಸ್ವಯಂ ಸೇವಕ/ಸ್ವಯಂ ಸೇವಕಿಯರಿಗೆ ತರಬೇತಿ ಕಾರ್ಯಕ್ರಮ ಸಂಯೋಜನಾದಿಕಾರಿಗಳು / ಕಾರ್ಯಕ್ರಮಾಧಿಕಾರಿಗಳ ಮೂಲಕ ಜೀವನ ಕೌಶಲ್ಯ ತರಬೇತಿ ಮತ್ತು ಆಪ್ತಸಲಹೆ ನೀಡಲಾಗಿದೆ.
6. ಮಹಾತ್ಮ ಗಾಂಧೀಜಿಯವರ ಜೀವನ ಮತ್ತು ಸಿದ್ಧಾಂತಗಳ ಕುರಿತಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿಭವನ, ಬೆಂಗಳೂರು ಇವರಿಗೆ ರೂ.28.00ಲಕ್ಷಗಳನ್ನು ಅನುದಾನ ಬಿಡುಗಡೆ ಮಾಡಲಾಗಿದೆ.
7. ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ರೂ.25.00ಲಕ್ಷಗಳನ್ನು ವಿಶ್ವವಿದ್ಯಾನಿಲಯಗಳಿಗೆ ಕಾರ್ಯಕ್ರಮವನ್ನು ಆರಂಭಿಸಲು ಅನುದಾನ ನೀಡಲಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನೋಡಲ್ ವಿಶ್ವವಿದ್ಯಾನಿಲಯವನ್ನಾಗಿ ನೇಮಕ ಮಾಡಲಾಗಿದ್ದು, ಅನುದಾನವನ್ನು ಈ ವಿಶ್ವವಿದ್ಯಾನಿಲಯ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ನೀಡಲು ಪ್ರಾರಂಭಿಸಿದೆ.


ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ




K.L.E. Society's J. G. College of Commerce, Hubballi


ಶ್ರೀ ಕೆ.ಸಿ. ನಾರಾಯಣಗೌಡ
ಆದರದ ಸ್ವಾಗತ




ಸ್ವಾತಂತ್ರ್ಯದ ಅಮೃತ ಮಹೋತ್ಸವ
ಭಾರತ @ 75





## ಕೋವಿಡ್-19ಗೆ ಸಂಬಂಧಿಸಿದ ಕಾರ್ಯಕ್ರಮಗಳು

- ಎಲ್ಲಾ ಕಾರ್ಯಕ್ರಮಾಧಿಕಾರಿಗಳ ಪಟ್ಟಿಯನ್ನು ಜಿಲ್ಲಾ ಆಡಳಿತಕ್ಕೆನೀಡಲಾಗಿದೆ. ಸಂಯೋಜನಾಧಿಕಾರಿಗಳು ಜಿಲ್ಲಾಡಳಿತದ ಸಂಪರ್ಕದಲ್ಲಿದ್ದಾರೆ.

- ಜಿಲ್ಲಾಡಳಿತ ಮತ್ತು ಇತರ ಇಲಾಖೆಗಳು ಸಹಕಾರ ಕೇಳಿದಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಸಹಕಾರ ನೀಡುವಂತೆ ಈಗಾಗಲೇ ಸೂಚಿಸಲಾಗಿದೆ.

- ಈಗಾಗಲೇ ಪ್ರತಿಜಿಲ್ಲೆಗೆ 3 ರಂತೆ ಸುಮಾರು 150 ಸಂಯೋಜನಾಧಿಕಾರಿಗಳು ಮತ್ತು ಕಾರ್ಯಕ್ರಮಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಾಯದೊಂದಿಗೆ COMBATING COVID-19 MASTER TRAINING ತರಬೇತಿಯನ್ನು ನೀಡಲಾಗಿದೆ ಮತ್ತು ಅವರು ಈಗಾಗಲೇ ಸ್ವಯಂಸೇವಕರಿಗೂ ತರಬೇತಿಯನ್ನು ನೀಡಿದ್ದಾರೆ.

- NICEಈ ಸಹಯೋಗದಲ್ಲಿ ಈಗಾಗಲೇ 950 ಅಧಿಕಾರಿಗಳಿಗೆ ಕೋವಿಡ್-19 ಬಗ್ಗೆ ONLINE ತರಬೇತಿ ನೀಡಲಾಗಿದೆ. ಈ ತರಬೇತಿ ಪಡೆದ ಕಾರ್ಯಕ್ರಮಾಧಿಕಾರಿಗಳು 2.5 ಲಕ್ಷ ಸ್ವಯಂ ಸೇವಕರಿಗೆ ತರಬೇತಿಯನ್ನು ನೀಡಿದ್ದಾರೆ. ಅಲ್ಲದೆ 1.8 ಲಕ್ಷ ಸ್ವಯಂಸೇವಕರು ಕೋವಿಡ್ ವಾರಿಯರ್ಸ್ ಆಗಿ ನೊಂದಾಯಿಸಿಕೊಂಡಿದ್ದಾರೆ.

- ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಡಳಿತ ಮತ್ತು ಇತರ ಇಲಾಖೆಗಳಿಗೆ ಅಧಿಕಾರಿಗಳು ಮತ್ತು ಸ್ವಯಂಸೇವಕರು ಸಹಕಾರಕ್ಕಾಗಿ ನಿಯೋಜನೆಗೊಂಡಿದ್ದಾರೆ.

- ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾನಿಲಯದ ಕುಲಪತಿಗಳ ಸೂಚನೆಯಂತೆ ಗರಿMಷ್ಠ ಸಂಖ್ಯೆಯ ಸ್ವಯಂ ಸೇವಕರು ಅರಿವು ಕಾರ್ಯಕ್ರಮ ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

- ವಿಶ್ವವಿದ್ಯಾನಿಲಯಗಳ ಸಹಕಾರದೊಂದಿಗೆ ಕೋವಿಡ್-19 ಅರಿವು, ಒತ್ತಡ ನಿರ್ವಹಣೆ ಇತ್ಯಾದಿ ವಿಚಾರಗಳ ಕುರಿತಾಗಿ 150 ಕ್ಕೂ ಹೆಚ್ಚು **ONLINE** ಕಾರ್ಯಕ್ರಮಗಳನ್ನು ನಡೆಸಲಾಗಿದೆ

- ಸ್ವಯಂ ಸೇವಕರು ಲಕ್ಷಾಂತರ ಮಾಸ್ಕ್ ಮತ್ತು ಸ್ಯಾನಿಟೈಸರ್ ಗಳನ್ನು ವಿತರಿಸಿದ್ದಾರೆ ಹಾಗೂ ಆಹಾರ ವಿತರಣೆಯಲ್ಲಿ ಸಹಕರಿಸದ್ದಾರೆ.

- ಯುನಿಸೆಫ್ ಸಹಕಾರದಲ್ಲಿ ಕಟ್ಟಡ ನಿರ್ಮಾಣ ಸ್ಥಳ, ಕೊಳಗೇರಿ ಹಾಗೂ ಕ್ವಾರಂಟೈನ್ ಕೇಂದ್ರಗಳಲ್ಲಿ ಕೋವಿಡ್-19 ಬಗ್ಗೆ ಭಿತ್ತಿಪತ್ರಗಳ ಮೂಲಕ ಅರಿವು ಮೂಡಿಸಲಾಗಿದೆ

- ನಿಮ್ಹಾನ್ಸ್ ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ ಪ್ರಚಲಿತವಿದ್ದು ಈಗಾಗಲೇ 2500 ಅಧ್ಯಾಪಕರಿಗೆ ತರಬೇತಿ ನೀಡಲಾಗಿದೆ. ಅವರನ್ನು ಕೋವಿಡ್-19ಗೆ ಸಂಬಂಧ ಪಟ್ಟಂತೆ **STRESS** ಕಡಿಮೆಗೊಳಿಸುವ ಯೋಜನೆಯೊಂದನ್ನು ನಿಮ್ಹಾನ್ಸ್ ಸಿದ್ಧಪಡಿಸಿದ್ದು ಈಗಾಗಲೇ **CONCEPT NOTE** ನ್ನು ಅನುಷ್ಠಾನಗೊಳಿಸಿದೆ.

- ಬಿ.ಬಿ.ಎಂ.ಪಿ.ಯ ಹೇಳಿಕೆಯಂತೆ 400 ಸ್ವಯಂಸೇವಕರನ್ನು ಸ್ವಾಬ್ ಸಂಗ್ರಹಕ್ಕೆ ನಿಯೋಜಿಸಲಾಗಿತ್ತು.

- ವಿಶ್ವವಿದ್ಯಾನಿಲಯಗಳ ಸಹಕಾರದೊಂದಿಗೆ ಕೋವಿಡ್-19 ಅರಿವು, ಒತ್ತಡ ನಿರ್ವಹಣೆ ಇತ್ಯಾದಿ ವಿಚಾರಗಳ ಕುರಿತಾಗಿ 150 ಕ್ಕೂ ಹೆಚ್ಚು ಔಓಐಖಓಇ ಕಾರ್ಯಕ್ರಮಗಳನ್ನು ನಡೆಸಲಾಗಿದೆ

- ನಿಮ್ಹಾನ್ಸ್ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಆಪ್ತ ಸಲಹೆ ಮತ್ತು ಜೀವನ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 2724 ಕಾರ್ಯಕ್ರಮಾಧಿಕಾರಿಗಳಿಗೆ ತರಬೇತಿ ನೀಡಿ 3.93 ಲಕ್ಷ ವಿದ್ಯಾರ್ಥಿಗಳಿಗೆ ಗುಂಪುಗಳ ಮೂಲಕ ಆಪ್ತ ಸಲಹೆ ನೀಡಲಾಗಿದೆ.

- ಕೋವಿಡ್-19 ಮಹಾಮಾರಿಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಮತ್ತು ಜಾಥಾಗಳನ್ನು ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಆಯೋಜಿಸಿದ್ದು ಜಾಥಾಗಳಲ್ಲಿ ಜನಸಾಮಾನ್ಯರಿಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿಸುವುದಲ್ಲದೇ ಪ್ರಾತ್ಯಾಕ್ಷಿತವಾಗಿ ವಿವರಿಸಿದ್ದಾರೆ. ಎಲ್ಲಾದಕ್ಕಿಂತ ಹೆಚ್ಚಾಗಿ ಕೋವಿಡ್-19 ಸೋಂಕಿನ ಪರೀಕ್ಷೆಗೆ ಮತ್ತು ಕೋವಿಡ್-19 ವ್ಯಾಕ್ಸಿನ್ ಹಾಕಿಸಿಕೊಳ್ಳಲು ತಾವೇ ಮೊದಲೇ ಮುಂದಾಗಿದ್ದು ಜನಸಾಮಾನ್ಯರಲ್ಲಿ ಮನೋಸ್ಥೈರ್ಯವನ್ನು ತುಂಬುವಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಎಲ್ಲಾ ಸಂಯೋಜನಾಧಿಕಾರಿಗಳು, ಕಾರ್ಯಕ್ರಮಾಧಿಕಾರಿಗಳು ಮತ್ತು ಸ್ವಯಂಸೇವಕರು ಪ್ರಮುಖ ಪಾತ್ರವಹಿಸಿದ್ದಾರೆ. ಅಲ್ಲದೇ ಸಂಬಂಧಿಸಿದ ಸ್ಥಳೀಯ ಆರೋಗ್ಯ ಇಲಾಖೆಯೊಡನೆ ಈ ನಿಟ್ಟಿನಲ್ಲಿ ಕೈಜೋಡಿಸಿದ್ದಾರೆ. ಈ ಕಾರ್ಯಕ್ಕೆ ಪ್ರಮುಖರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.














# ರಾಷ್ಟ್ರೀಯ ಸೇವಾ ಯೋಜನೆಯ ಗೀತೆ

ರಾಷ್ಟ್ರೀಯ ಸೇವಾ ಯೋಜನೆ ಮಾಡಿಹರು ಸೇವೆಯ ಮಾಡೋಣ ಬನ್ನಿ
ನಾವು ಸೇವೆಯ ಮಾಡೋಣ ಬನ್ನಿ, ಸೇವೆಯ ಮಾಡೋಣ ಬನ್ನಿ ॥2॥

ಕೈ ಕೆಸರಾಗಲಿ ನೆಲ ಹುಲುಸಾಗಲಿ
ಸೇವೆಯ ಮಾಡೋಣ ಬನ್ನಿ, ಸೇವೆಯ ಮಾಡೋಣ ಬನ್ನಿ ॥ರಾ॥

ಗ್ರಾಮಗಳ ಉದ್ಧಾರ ನಮ್ಮ ಉದ್ದೇಶ ಗ್ರಾಮಗಳು ಬೆಳೆಯೇ ಬೆಳೆಯುವುದು ದೇಶ
ಭ್ರಾತೃತ್ವ ಬೆಳೆಸಿ ಎಲ್ಲರಲ್ಲು ನಾವು ಸೇವೆಯ ಮಾಡೋಣ ಬನ್ನಿ ॥ರಾ॥

ಒಬ್ಬರಿಗೊಬ್ಬರು ಕಲಿಸುವ ಧೋರಣೆ ಒಬ್ಬೊಬ್ಬರೊಂದೊಂದು ಗಿಡ ಬೆಳೆಸುವ ಪ್ರೇರಣೆ
ಮಿತಸಂತತಿ ಹಿತನುಡಿಯ ನುಡಿಯೋಣ ಬನ್ನಿ, ಸೇವೆಯ ಮಾಡೋಣ ಬನ್ನಿ ॥ರಾ॥

ಪರಿಸರ ಅಭಿವೃದ್ಧಿ ಮಾಡುತ್ತ ಸಾಗೋಣ ಜೈವಿಕ ಅನಿಲೆಂತ್ರ ಪ್ರಚಾರಗೊಳಿಸೋಣ
ಹೊಗೆರಹಿತ ಒಲೆಗಳನು ನಿರ್ಮಾಣ ಮಾಡಿ ಸೇವೆಯ ಮಾಡೋಣ ಬನ್ನಿ ॥ರಾ॥

ಜಾತಿ ಮತ ಪಂಥಗಳ ಬೇಧವ ಮರೆತು ಸದ್ಭಾವದಿಂದ ಎಲ್ಲರಲ್ಲೂ ಬೆರೆತು
ದ್ವೇಷ ಅಸೂಯೆ ಮನದಿಂದ ಕಳೆದು ಸೇವೆಯ ಮಾಡೋಣ ಬನ್ನಿ ॥ರಾ॥

ಸಹಕಾರ ಸೌಹಾರ್ದ ಬೆಳೆಸೋಣ ಬನ್ನಿ ರಾಷ್ಟ್ರೀಯ ಭಾವೈಕ್ಯ ಉಳಿಸೋಣ ಬನ್ನಿ
ಯುವ ಶಕ್ತಿ ಜಯತೆ ಪಠಿಸೋಣ ಬನ್ನಿ ಸೇವೆಯ ಮಾಡೋಣ ಬನ್ನಿ ॥ರಾ॥

ಸೇವೆಯ ಮಾಡುತ್ತಾ ಕಲಿಯೋಣ ಬನ್ನಿ ಸೇವೆಯ ಸವಿಜೇನು ಸವಿಯೋಣ ಬನ್ನಿ
ಸೇವೆಯ ಸವಿಜೇನು ಹಂಚೋಣ ಬನ್ನಿ ಶ್ರಮಯೇವ ಜಯತೇ, ಶ್ರಮಯೇವ ಜಯತೇ,
ಶ್ರಮಯೇವ ಜಯತೆ ಶ್ರಮಯೇವ ಜಯತೆ ॥ರಾ॥

ರಚನೆ: ಡಾ॥ ದಿಲ್‌ಶಾದ್

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಷ್ಟ್ರೀಯ ಸೇವಾ ಯೋಜನೆ ಕೋಶ

YOUTH EMPOWERMENT & SPORTS DEPARTMENT

NATIONAL SERVICE SCHEME CELL

Government of Karnataka

M.S. Building, 2nd Floor, Bengaluru - 560 001